ಈ) ಹೌದು ಆದರೆ ರೇಷ್ಮೆ ಕಾರ್ಖಾನೆಗಳಲ್ಲಿನ ಉತ್ಪಾದನಾ ಕೆಲಸಗಾರರು ನಿವೃತ್ತಿ ಹೊಂದಿದ್ದು ಯಂತ್ರೋಪಕರಣಗಳು ಹಳೆಯದಾಗಿರುತವ ಕಾರಣ ಉತ್ಪಾದನೆ ಸಾಮರ್ಥ್ಯ ಕಡಿಮೆಯಾಗಿ ರೇಷ್ಮೆ ಉತ್ಪಾದನಾ ವೆಚ್ಚ ಹೆಚ್ಚಾಗಿದೆ ಆದ್ದರಿಂದ 4 ರೇಷ್ಮೆ ಕಾರ್ಖಾನೆಗಳನ್ನು 2 ಘಟಕಗಳಾಗಿ ಪರಿವರ್ತಿಸಲು ಸರ್ಕಾರ ಆದೇಶಿಸಿರುತ್ತದೆ

ಉ) 4 ಕಾರ್ಖಾನೆಗಳನ್ನು 2ನ್ನಾಗಿ ಪುನರ್ಘಟಿಸಿ, ಅವುಗಳನ್ನು ಲಾಭದಾಯಕವಾಗಿ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ

## ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ

244 (542) ಶ್ರೀ ಎ ಆರ್ ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೂ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಉದ್ಯೋಗ ಪಡೆದಿರುವ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ಕೈಗೊಂಡಿದ್ದಲ್ಲಿ ಯಾವ ಯಾವ ಇಲಾಖೆಗೆ ಸಂಬಂಧಿಸಿದ ಯಾವ ಯಾವ ಉದ್ಯೋಗಿ ಅಧವಾ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ (ಪದನಾಮ ಹಾಗೂ ಹುದ್ದೆ ಸಹಿತ ವಿವರ ನೀಡುವುದು)

ಆ) ಈ ಪ್ರಕರಣಗಳು ಯಾವ ಹಂತದಲ್ಲಿದೆ ಪೂರ್ಣಗೊಂಡಿರುವ ಪ್ರಕರಣಗಳ ವಿವರ ನೀಡುವುದು

ಇ) ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ಇದ್ದಲ್ಲಿ ಯಾವ ಪ್ರಕರಣಗಳು ನ್ಯಾಯಾಲಯದಲ್ಲಿ ಇವೆ ಇನ್ನುಳಿದ ಪ್ರಕರಣಗಳು ಯಾವ ಯಾವ ಇಲಾಖೆಗಳಲ್ಲಿ ಇವೆ ಮತ್ತು ಇಲಾಖಾ ವ್ಯಾಪ್ತಿಯಲ್ಲಿರುವ ಪ್ರಕರಣಗಳಿಗೆ ವಿಚಾರಣಾಧಿಕಾರಿಗಳು ಯಾರು (ವಿವರ ನೀಡುವುದು)

ಈ) ಸುಳ್ಳು ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳನ್ನು ಪತ್ತೆ ಹಚ್ಚಲು ಅಧವಾ ಸಾಬೀತುಪಡಿಸಲು ಸರ್ಕಾರ ಅನುಸರಿಸುವ ಮಾನದಂಡವೇನು ಮತ್ತು ಜಾತಿ ಪ್ರಮಾಣದ ದೃಢೀಕರಣವನ್ನು ಯಾವ ಇಲಾಖೆ ನೀಡಬೇಕು? (ವಿವರ ನೀಡುವುದು)

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಈವರೆವಿಗೂ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಉದ್ಯೋಗ ಪಡೆದಿರುವ ವ್ಯಕ್ತಿ ಜಾತಿಯ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡಿ ವಿಚಾರಣಾ ವರದಿ ಮತ್ತು ದಾಖಲಾತಿಗಳನ್ನು ರಾಜ್ಯ ಮಟ್ಟದ ಜಾತಿ ಪರಿಶೀಲನಾ ಸಮಿತಿ/ ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿ ಗಳಿಗೆ ಕಳುಹಿಸಿ ಅಂತಿಮ ನಿರ್ಣಯ ಪಡೆದು ಸಂಬಂಧಪಟ್ಟ ಪೊಲೀಸ್ ಠಾಣೆ ಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ ಇವರುಗಳು ಯಾವ ಯಾವ ಇಲಾಖೆಗೆ ಸಂಬಂಧಿಸಿದ್ದಾರೆ ಹಾಗೂ ಅವರ ಹುದ್ದೆಯ ವಿವರಗಳನ್ನು ಲಗತ್ತಿಸಿರುವ ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ (ಕಲಂ4)

ಇ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ (ಕಲಂ 5)

ಈ) ಸುಳ್ಳು ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳನ್ನು ಸಾಬೀತುಪಡಿಸಲು ವಿಚಾರಣಾ ಸಮಯದಲ್ಲಿ ಆಪಾದಿತರು ವಂಶವೃಕ್ಷ ಶಾಲಾ ದಾಖಲಾತಿಗಳು, ಕಸಬು ಆಚಾರ ವಿಚಾರ, ತಂದೆ

ತಾಯಿಗಳ ಶಾಲಾ ದಾಖಲಾತಿಗಳು, ಜಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಅವರ ಸ್ವಂತ ಸ್ಥಳದ ಸ್ಥಳೀಯರಿಂದ ನಿಖರವಾದ ಜಾತಿ ಬಗ್ಗೆ ಮಾಹಿತಿಯನ್ನು ಪಡೆದು ಅವರ ನಿಜವಾದ ಜಾತಿ ಯಾವುದು ಎಂಬುದನ್ನು ಕಂಡುಹಿಡಿದು ಅಂತಿಮ ನಿರ್ಣಯಕ್ಕೋಸ್ಕರ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗಳಿಗೆ ವರದಿಗಳನ್ನು ಸಲ್ಲಿಸಿಕೊಳ್ಳಲಾಗುವುದು ಜಾತಿ ಪರಿಶೀಲನಾ ಸಮಿತಿಯ ನಿರ್ಣಯದ ಮೇಲೆ ಕಾನೂನು ರೀತ್ಯಾ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು ಅಂದರೆ ಸಾಬೀತಾದ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ತನಿಖೆ ಕೈಗೊಳ್ಳಲಾಗುವುದು ಸಾಬೀತಾಗದ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗುವುದು

ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗಳು ಜಾತಿ ದೃಢೀಕರಣ ಪ್ರಕರಣಗಳನ್ನು ನೀಡುತ್ತಾರೆ

## Annexure-1

**Statement showing the details of action taken on the officials who had obtained false caste certificate and derived benefit after obtaining the final decision of the Caste Verification Committee**

| Sl. No | Name designation and address | name of the Department | Present Stage | Whether PT in the Court |
|---|---|---|---|---|
| 1 | 2 | 3 | 4 | 5 |
| | Sriyuthhs | | | |
| 1 | H N Halswamy KEB employee Kalkote Chitradurga District | KEB | -- | Evidence of Witnesses is comp leted awaiting Court judgement |
| 2 | D S Rajamma, D/o Shankarappa Teacher, Dyavanoor Channarayapattana, Hassan District | Education | Under inves-tigation | -- |
| 3 | Sri Shanthaiah S/o B Basaiah Hiremath Librarian Kendriya Vidhyalaya, Gulbarga District Gulbarga | Education | -- | Investigation com-pleted The reco-ords have to be sent to DCVC for reverification as per Court orders |

| 1 | 2 | 3 | 4 | 5 |
|---|---|---|---|---|
| 4 | S L Vijayendraswamy S/o S M Shanmugaiah Lecturer Government Pharmacy College & Inspector Drug Control Department, Bangalore | Drug Control Department | Under investi-gation | -- |
| 5 | Vasudeva S/o Kalluraiah P&T Department Shimoga | P&T | Under investi-gation | -- |
| 6 | H N Patil Police Inspector Gokak | Police | Under process to file charge sheet | - |
| 7 | M K Chowdhuri Inspector of Factories & Boilers Department Bijapur | F&B | Under investi-gation | -- |
| 8 | Geetha Marigappa Kulkarni Clerk UCO Bank Super Market Gulbarga | Bank | -- | Pending Trial |
| 9 | Shivappa Sangappa Doddamani Police Constable, Ayeri, Bijapur | Police | Under Process to file Chargesheet | - |
| 10 | M N Jakkannanavar Jammalagi Inspector of Factories and Boilers Department Basavanabagewadi | F&B | Under investi-gation | -- |
| 11 | S F Purawadi, Clerk Canara Bank Sakleshpur | Bank | Under Investi gation | -- |

| 1 | 2 | 3 | 4 | 5 |
|---|---|---|---|---|
| 12 | Umadevi Shivaputrappa Machandi Mutt Clerk Cum-Cashier SBI Super Market Gulbarga, | Bank | -- | Stayed by High Court Letter Sent to Government to vacate stay |
| 13 | T S Doddamani GHA KSRP, Shiggaon, | Police | - | Awaiting DLCVC |
| 14 | Basaiah S/o Gavisiddaiah Gangur matta Teacher Alvandi, Koppal | Education | -- | Chargesheeted CC number awaited |
| 15 | Jagadishaswamy S/o Rajashekaraiah Sali Mutt Clerk SBI Koppal | Bank | Under process to submit Chargesheet to the Court | -- |
| 16 | Marthandappa S/o Marthandappa, Head Constable Richur District Raichur | Police | Under investigation | -- |
| 17 | Srimantha, S/o Shivalingappa, Savalagi, Peon Gulbarga Univeresity Gulbarga | Education | Under investigation | -- |
| 18 | V M Poojari, SDA Gulbrag University Gulbarga | Education | -- | As per the G O dated 11-3-2002 B final report submitted to concerned Court |

| 1 | 2 | 3 | 4 | 5 |
|---|---|---|---|---|
| 19 | Shobhavathi Yane Shobha Suresh Clerk Syndicate Bank Gandhinagar Bangalore | Bank | -- | Pending Trial |
| 20 | S Krishnappa, S/o Shivanappa, Asst Engineer, BWSSB Bangalore | BWSSB | Under Scruiny Submit final report to the Court | - |
| 21 | Latha D/o Basavaiah Gr III BHEL Bangalore | BHEL | - | B final report Submitted to the Concerned Court |
| 22 | Shobha Lakshmi AEO Sahithya Academy Bangalore | Sahithya Academy | Under investi gation | |
| 23 | B C Nagaraj Clerk Dena Bank Bangalore | Bank | Under in vesti gation | |
| 24 | G Keshava Murthy Dy Manager MMTC Bangalore | MMTC | Under investi gation | - |
| 25 | M S Poorvi Mutt, Clerk SBI Sauvadatti | Bank | Under investi gation | - |
| 26 | Jayashri D/o Srimanth Chowdhury Typist Fort Ist Grade College Shirahatti Athani | Education | Under investi gation | -- |
| 27 | B H Nayakawadi Peon | Education | Under investi- gation | -- |

| 1 | 2 | 3 | 4 | 5 |
|---|---|---|---|---|
| | SK High School<br>Kammatagi<br>Hunagunda, Bagalkot<br>Dist | | | |
| 28 | D P Rajeshwari,<br>D/o Eranna<br>Typist<br>District Court, Bijapur | Court | Under investi-gation | -- |
| 29 | Venkataramaiah<br>Asst Manager<br>SBM, Harapanahalli | Bank | Under investi-gation | - |
| 30 | Nagaraj S/o Pillappa<br>Sheety Accountant,<br>MSIL Bangalore | MSIL | Under investi-gation | - |
| 31 | Siddaramappa<br>S/o Sharanappa Sannur<br>Dy Superintendent of<br>Police, Chincholli sub-<br>Division Gulbarga | Police | -- | Permitted to sub-mit chargesheet |
| 32 | B G Manjuala<br>Sr Assistant KGS<br>Bangalore | Secretariat | Under investi-gation | -- |
| 33 | S Shivakumar<br>President<br>Revenue Department<br>O/o Asst Director,<br>Mysore | Revenue | Under investi-gation | - |
| 34 | S B Prakasham<br>Driver<br>India Institute of<br>Management Bangalore | I I M | Under investi gation | -- |
| 35 | Raju Sathambe<br>Typist-Copiest<br>District Court Bijapur | Dist Court | Under investi-gation | -- |

| 1 | 2 | 3 | 4 | 5 |
|---|---|---|---|---|
| 36 | Droupathi Narayanarao FDA Government Hospital Gulbarga | Health | Under investi-gation | -- |
| 37 | K Krishna Murthy, S/o Kullinadapillai, ITI employee | I T I | Under investi-gation | - - |
| 38 | C A Balmakar Police Inspector Indi | Police | Under investi-gation | -- |

**ರಾಜ್ಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ**

245 (543) ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ತುಂಬಲಾದ ಬ್ಯಾಕ್ ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು (ಇಲಾಖಾವಾರು ವಿವರ ನೀಡುವುದು)

ಆ) ಹಾಲಿ ತುಂಬಬೇಕಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು. (ಇಲಾಖಾವಾರು ಪೂರ್ಣವಿವರ ನೀಡುವುದು)

ಇ) ಸರ್ಕಾರ ಈವರೆಗೆ ಭರವಸೆ ನೀಡಿದ್ದ ದಿನಾಂಕದಂದು ಪೂರ್ಣ ಪ್ರಮಾಣದಲ್ಲಿ ಬ್ಯಾಕ್ ಲಾಗ್ ಹುದ್ದೆಯನ್ನು ತುಂಬಲಾಗಿದೆಯೇ ಇಲ್ಲದಿದ್ದಲ್ಲಿ ಕಾರಣವೇನು ಯಾವಾಗ ಪೂರ್ಣ ಪ್ರಮಾಣದಲ್ಲಿ ಬ್ಯಾಕ್ ಲಾಗ್ ಹುದ್ದೆಯನ್ನು ತುಂಬಲಾಗುವುದು (ವಿವರ ನೀಡುವುದು)?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದ ವಿವಿಧ ಇಲಾಖೆ, ನಿಗಮ ಮಂಡಳಿಗಳು, ವಿಶ್ವವಿದ್ಯಾನಿಲಯಗಳು ಹಾಗೂ ಸಹಕಾರಿ ಸಂಸ್ಥೆಗಳಲ್ಲಿ ಈವರೆಗೆ 12274 ಬ್ಯಾಕ್‌ಲಾಗ್ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ ಇಲಾಖಾವಾರು ಮಾಹಿತಿ ಲಗತ್ತಿಸಿದೆ

ಆ) ಗುರುತಿಸಲಾದ 17220 ಹುದ್ದೆಗಳಲ್ಲಿ 14497 ಹುದ್ದೆಗಳನ್ನು ಪ್ರಕಟಿಸಿದ್ದು, 12274 ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ ಅದರಲ್ಲಿ 12274 ಅಭ್ಯರ್ಥಿಗಳನ್ನು ಈಗಾಗಲೇ ನೇಮಕಾತಿ ಮಾಡಲಾಗಿದೆ ಸಚಿವ ಸಂಪುಟ ಉಪ ಸಮಿತಿಯಲ್ಲಿ ತೀರ್ಮಾನಿಸಿದಂತೆ 2286 ಹುದ್ದೆಗಳನ್ನು ಮುಂದೆ ಭರ್ತಿಮಾಡಲಾಗುವುದು 216 ಹುದ್ದೆಗಳು ಆರ್ಥಿಕ ಸಂಕಷ್ಟದಲ್ಲಿರುವ ಸಂಸ್ಥೆಗಳಲ್ಲಿನ ಹುದ್ದೆಗಳಾಗಿದ್ದು ಭರ್ತಿ ಮಾಡಲು ಸಾಧ್ಯವಾಗುವುದಿಲ್ಲ 2444 ಹುದ್ದೆಗಳನ್ನು ಇನ್ನೂ ತುಂಬಬೇಕಾಗಿದೆ

ಇ) ಸರ್ಕಾರ ಭರವಸೆ ನೀಡಿದಂತೆ ಪ್ರಕಟಿಸಿದ ಹುದ್ದೆಗಳಲ್ಲಿ ಸುಮಾರು ಶೆ 85 ರಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಕೆಲವು ತಾಂತ್ರಿಕ ಹುದ್ದೆಗಳಿಗೆ ಅಭ್ಯರ್ಥಿಗಳ ಕೊರತೆ ಇರುವುದರಿಂದ ಮತ್ತು ಕೆಲವು ಆಯ್ಕೆಯಾದ ಅಭ್ಯರ್ಥಿಗಳಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆಯುವಲ್ಲಿ ವಿಳಂಬವಾಗಿರುವುದರಿಂದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ ಈ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಈಗಾಗಲೇ ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ